ಓ.ಎಸ್.ನಂಃ 202/2023
ಪಿ.ಡಬ್ಲ್ಯೂಃ 1

<u>ದಿನಾಂಕಃ 07-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

ನಿಪಿ-1 ರಲ್ಲಿ ದಾವಾ ಸ್ವತ್ತನ್ನ ನನ್ನ ಚಿಕ್ಕಪ್ಪ, ನನ್ನ ಅಜ್ಜಿ ಮತ್ತು ನನ್ನ ಅಜ್ಜ ಸೇರಿ ಖರೀದಿ ಮಾಡಿರುವುದಾಗಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಚಿಕ್ಕಪ್ಪ, ನನ್ನ ತಂದೆ ಮತ್ತು ನನ್ನ ಸೋದರತ್ತೆ ಸೇರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಹಕ್ಕು ಇಲ್ಲ ಎಂದು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ಅಜ್ಜನಿಗೆ ಮಲ್ಲೇಗೌಡರು, ಭದ್ರೇಗೌಡರು, ಗಿಡ್ಡೇಗೌಡರು, ಹೀರೇಗೌಡರು, ಪಾರ್ವತಮ್ಮ ಮತ್ತು ಮಲ್ಲಮ್ಮ ಸಹೋದರ ಸಹೋದರಿಯರು ಎಂದರೆ ಸರಿ. ನನ್ನ ಅಜ್ಜನ ಸಹೋದರ ಸಹೋದರಿಯರಿಗೆ ಮಕ್ಕಳು ಇದ್ದಾರೆ ಎಂದರೆ ಸರಿ. ನನ್ನ ಅಜ್ಜನ ಸಹೋದರ ಸಹೋದರಿಯರು ಕೆರಮಕ್ಕಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಮಲ್ಲೇಗೌಡರ ಮಗ ಶಾಂತಪ್ಪ ಕೆರಮಕ್ಕಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಹೊಸಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎನ್ನುತ್ತಾರೆ. ಕೆರಮಕ್ಕಿ ಗ್ರಾಮದಿಂದ ಹೊಸೂರು ಗ್ರಾಮ 5 ರಿಂದ 6 ಕಿ.ಮೀ ದೂರದಲ್ಲಿ ಇದೆ ಎಂದರೆ ಸರಿ. ನನ್ನ ಅಜ್ಜನ ಸಹೋದ ಸಹೋದರಿಯರ ವಾರಸುದಾರರು ಕೆರಮಕ್ಕಿ ಗ್ರಾಮದ ಸುತ್ತಮುತ್ತ ಹಳ್ಳಿಗಳಲ್ಲಿ ವಾಸವಿದ್ದಾರೆ ಎಂದರೆ ಸರಿ. ಪದ್ಮೇಶ, ಸುಂದರೇಶ, ನಾಗೇಶಗೌಡ ಇವರು ಅಲ್ಲಿಯೇ ಅಕ್ಕಪಕ್ಕದ ಹಳ್ಳಿಗಳಲ್ಲಿ ವಾಸವಿದ್ದಾರೆ ಎಂದರೆ ಸರಿ. ನಮ್ಮ ಅಜ್ಜನಿಗೆ

ಸುಮಾರು 50 ಕುಟುಂಬಗಳಿರುವ ಕುಟುಂಬ ಇದೆ ಎಂದರೆ ಸರಿ. ನನ್ನ ಅಜ್ಜ ಮತ್ತು ಅಜ್ಜಿ ಜೀವಂತ ಇದ್ದಾಗ ಅವರ ಸಂಬಂಧಿಕರೊಂದಿಗೆ ವಿಶ್ವಾಸದಿಂದ ಇದ್ದರು ಎಂದರೆ ಸರಿ. ನನ್ನ ಅಜ್ಜನ ಕುಟುಂಬಸ್ಥರು ಮತ್ತು ಸಂಬಂಧಿಕರು ನಿಪಿ-1 ರ ವಿಲ್ ನಲ್ಲಿ ಸಾಕ್ಷಿದಾರರಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜ ಜೀವಂತ ಇದ್ದ ಕಾಲಕ್ಕೆ ಯಾವ ಸಂಬಂಧಿಕರನ್ನೂ ಸಹ ಹತ್ತಿರ ಸೇರಿಸುತ್ತಿರಲಿಲ್ಲ ಎನ್ನುತ್ತಾರೆ. ನಾವು ಒಕ್ಕಲಿಗ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಜೋಹಿಸ್ ಎಂಬ ಹೆಸರು ಸರ್ವೆ ಸಾಮಾನ್ಯ ಬ್ರಾಹ್ಮಣ ಸಮುದಾಯದಲ್ಲಿ ಬರುವ ಹೆಸರು ಎಂದರೆ ಸರಿ. ನಿಪಿ-2 ರಲ್ಲಿ ವಿಜಯ್ ಕುಮಾರ್ ಬಿನ್ ಸಿ.ಎಸ್.ಎಂ.ಜೋಹಿಸ್ ಎಂದು ಬರೆಯಲಾಗಿದೆ ಎಂದರೆ ಸರಿ. ನಮಗೆ ಬಸವನಹಳ್ಳಿಯಲ್ಲಿ ಯಾವುದೇ ಸಂಬಂಧಿಕರು ಇಲ್ಲ ಮತ್ತು ಕುಟುಂಬಸ್ಥರು ಇಲ್ಲ ಎಂದರೆ ಸರಿ. ಬಸವನಹಳ್ಳಿಯಲ್ಲಿ ನನಗೆ ಯಾರೂ ಸ್ನೇಹಿತರಾಗಲೀ ಸಂಬಂಧಿಕರಾಗಲೀ ಅಲ್ಲ. ನಿಪಿ-1 ಮತ್ತು 2 ರ ಮೇಲೆ ಸಹಿ ಮಾಡಿರುವ ಸಾಕ್ಷಿದಾರರು ಬಸವನಹಳ್ಳಿಯವರು ಎಂದರೆ ಸಾಕ್ಷಿ ಇರಬಹುದು ಆದರೆ ಅವರು ಯಾರೂ ನನ್ನ ಸ್ನೇಹಿತರಲ್ಲ, ನನ್ನ ಅಜ್ಜನಿಗೆ ಗೊತ್ತಿದ್ದವರು ಇರಬಹುದು ಎನ್ನುತ್ತಾರೆ. ದಿಃ26.03.2019 ರಂದು ನನ್ನ ಅಜ್ಜನ ಖಾತೆಯಿಂದ ಚೆಕ್ ಸಂಖ್ಯೆಃ525741 ರ ಮುಖಾಂತರ ರೂ.25,30,000/- ನನ್ನ ಖಾತೆಗೆ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ08.04.2019 ರಂದು ನನ್ನ ಅಜ್ಜನ ಖಾತೆಯಿಂದ ನನ್ನ ಖಾತೆಗೆ 2 ಲಕ್ಷ ಹಣ ಚೆಕ್ ನಂ.525742 ಮುಖಾಂತರ ವರ್ಗಾವಣೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಮತ್ತು ನನ್ನ ಅಜ್ಜನ ನಡುವೆ ವ್ಯವಹಾರ ಇದ್ದುದರಿಂದ ವರ್ಗಾವಣೆಯಾಗಿದೆ ಎನ್ನುತ್ತಾರೆ.

ದಿಃ29.08.2020 ರಂದು ರೂ.10,16,000/- ಹಣ ನನ್ನ ಅಜ್ಜನ ಖಾತೆಯಿಂದ ನನ್ನ ಖಾತೆಗೆ ಚೆಕ್ ನಂ.521915 ಮುಖಾಂತರ ವರ್ಗಾವಣೆಯಾಗಿದೆ ಎಂದರೆ ಸರಿ. ದಿಃ20.08.2020 ರಂದು ರೂ.25,30,000/- ಹಣ ನನ್ನ ಅಜ್ಜನ ಖಾತೆಯಿಂದ ನನ್ನ ಖಾತೆಗೆ ಚೆಕ್ ನಂ.521914 ಮುಖಾಂತರ ವರ್ಗಾವಣೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜನ ಖಾತೆಯಲ್ಲಿ 33 ಲಕ್ಷ ಮಾತ್ರ ಹಣ ಇತ್ತು ಅದನ್ನ ತೆಗೆಯುವ ಮತ್ತು ಜಮಾ ಮಾಡುವ ಮುಖಾಂತರ ಆ ರೀತಿ ವ್ಯವಹಾರ ಆಗಿದೆ ಎನ್ನುತ್ತಾರೆ. ನನ್ನ ಅಜ್ಜ ದಿಃ20.03.2023 ರಂದು ತೀರಿಕೊಂಡಿರುತ್ತಾರೆ. ನಿಪಿ-1 ಮತ್ತು 2 ರ ವಿಲ್ ನಲ್ಲಿ ನನ್ನ ಅಜ್ಜನ ಖಾತೆಯಿಂದ ಹಣ ಹಿಂಪಡೆಯಬಹುದು ಎಂದು ಎಲ್ಲಿಯೂ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಆ ರೀತಿ ಉಲ್ಲೇಖ ಇದೆ ಮತ್ತು ನಾನು ನನ್ನ ಅಜ್ಜನ ಖಾತೆಗೆ ನಾಮಿನಿಯಾಗಿದ್ದೆ ಎನ್ನುತ್ತಾರೆ. ದಿಃ07.10.2020 ರಂದು ನನ್ನ ಅಜ್ಜ ಹಿರಿಯ ನಾಗರೀಕ ಸಹಾಯವಾಣಿ ಇವರ ಮುಂದೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ಅವರ ಮುಖಾಂತರ ದೂರು ಕೊಡಿಸಿದ್ದರು ಎನ್ನುತ್ತಾರೆ. ಸದರಿ ದೂರಿನಲ್ಲಿ ಸದರಿ ದೂರಿನಲ್ಲಿ ನನ್ನ ಅಜ್ಜ ನನಗೆ ತಿಳಿಯದಂತೆ ನನ್ನ ಖಾತೆಯಿಂದ ಬೇರೆ ಬೇರೆ ದಿನಾಂಕಗಳಲ್ಲಿ ನಾನು ಹಣ ಹಿಂಪಡೆದಿದ್ದೇನೆ ಮತ್ತು ತನ್ನ ಇಚ್ಚೆಗೆ ವಿರುದ್ಧವಾಗಿ ದಾನಪತ್ರವನ್ನ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದು ದೂರಿದರು ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ಆ ರೀತಿ ನನ್ನ ಅಜ್ಜನ ಮುಖಾಂತರ ದೂರು ಕೊಡಿಸಿದ್ದರು ಎನ್ನುತ್ತಾರೆ. ನನ್ನ ಅಜ್ಜ ಹಿರಿಯ ನಾಗರೀಕ ಸಹಾಯವಾಣಿ ಮುಂದೆ ಹಣ ಹಿಂಪಡೆಯಲಾಗಿದೆ ಮತ್ತು ದಾನಪತ್ರ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದು ದೂರು ಕೊಟ್ಟಿದ್ದರು ಎಂದರೆ

ಸಾಕ್ಷಿ ಸದರಿ ದೂರು ಪೂರ್ವಭಾವಿಯಾಗಿ ಟೈಪ್ ಮಾಡಿಸಿ ಕೊಡಿಸಲಾಗಿದೆ ಎನ್ನುತ್ತಾರೆ. ಸದರಿ ದೂರಿನಲ್ಲಿ ನನ್ನ ಅಜ್ಜ ನನ್ನ ಜೀವನ ನಿರ್ವಹಣೆಗೆ ಯಾವುದೇ ಹಣ ಕೊಡುತ್ತಿಲ್ಲ, ನನ್ನ ಖಾತೆಯಿಂದ ಹಣ ಹಿಂಪಡೆಯಲಾಗಿದೆ ಮತ್ತು ನನ್ನಿಂದ ಬೇರೆ ಬೇರೆ ದಾಖಲಾತಿಗಳ ಮೇಲೆ ಸಹಿ ಪಡೆಯಲಾಗಿದೆ ಎಂದು ದೂರಿದರು ಎಂದರೆ ಸಾಕ್ಷಿ ಅವರು ಆ ರೀತಿ ದೂರು ಕೊಟ್ಟಿಲ್ಲ ದೂರನ್ನ ಟೈಪ್ ಮಾಡಿಸಿ ನನ್ನ ಅಜ್ಜನಿಂದ ಸಹಿ ಪಡೆದು ಸದರಿ ಪ್ರಾಧಿಕಾರದ ಮುಂದೆ ಕೊಡಲಾಗಿದೆ ಎನ್ನುತ್ತಾರೆ. ನನ್ನ ಅಜ್ಜನ ಖಾತೆಯಿಂದ ಹಣ ಹಿಂಪಡೆದ ಕಾಲಕ್ಕೆ ನನಗೆ ಸಾಲ ಇತ್ತು ಎಂದರೆ ಸರಿ. ಸದರಿ ಸಾಲದ ತೀರುವಳಿಗಾಗಿ ನನ್ನ ಅಜ್ಜನ ಖಾತೆಯಿಂದ ಹಣ ಹಿಂಪಡೆದಿದ್ದೇನೆ ಎಂದು ಮಾನ್ಯ ಉಪವಿಭಾಗಾಧಿಕಾರಿಗಳ ಮುಂದೆ ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಅಜ್ಜ ಹಣ ಕೊಟ್ಟಿದ್ದರಿಂದ ನಾನು ಹಣ ಪಡೆದಿದ್ದೇನೆ ಎನ್ನುತ್ತಾರೆ. ನನ್ನ ಅಜ್ಜ ನಮ್ಮ ಕುಟುಂಬಕ್ಕೆ ಯಾವುದೇ ವಿಲ್ ಅನ್ನ ಬರೆದಿಟ್ಟಿಲ್ಲ, ದಾನಪತ್ರ ಸೃಷ್ಟಿ ಮಾಡಿಕೊಂಡಿರುವಂತೆ ನಿಪಿ-1 ಮತ್ತು 2 ರ ವಿಲ್ ಗಳನ್ನೂ ಸಹ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ವಿಲ್ ನಲ್ಲಿ ನನ್ನ ಅತ್ತೆಗೆ 10 ಲಕ್ಷ ಹಣ ಸೇರಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜ ತೀರಿಕೊಳ್ಳುವ ಮೊದಲೇ ನನ್ನ ಸೋದರತ್ತೆ ತೀರಿಕೊಂಡಿದ್ದರು ಎನ್ನುತ್ತಾರೆ. ನನ್ನ ಸೋದರತ್ತೆಯರ ವಾರಸುದಾರರು ಇದ್ದಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಅವರ ಆಸ್ತಿಗಳು ಅವರ ವಾರಸುದಾರರಿಗೆ ಸೇರಿಬೇಕು ಎಂದರೆ ಸರಿ. ವಿಲ್ ನಲ್ಲಿ ನಮೂದಿಸಿರುವಂತೆ 10 ಲಕ್ಷ ಹಣವನ್ನ ನಿಮ್ಮ ಸೋದರತ್ತೆ ವಾರಸುದಾರರಿಗೆ ತಲುಪಿಸಿದ್ದೀರಾ

ಎಂದರೆ ಸಾಕ್ಷಿ ನಾನು ಯಾವುದೇ ಹಣ ಅವರಿಗೆ ಪಾವತಿ ಮಾಡಿಲ್ಲ, ನನ್ನ ಅಜ್ಜ ಇಟ್ಟಿದ್ದ ಹಣವನ್ನ ನನಗೆ ಕೊಟ್ಟರು ಎನ್ನುತ್ತಾರೆ. ನಿಪಿ-1 ರ ವಿಲ್ ನಲ್ಲಿ ನನ್ನ ಮರಣ ನಂತರ 25 ಲಕ್ಷ ಹಣವನ್ನ ನನ್ನ ಮಗಳಾದ ಚಿ.ಸೌ.ಸುಧಾ ದೀಪಕ್ ಇವರಿಗೆ ಸೇರಬೇಕು ಎಂದು ನಮೂದಿಸಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಕೋಡಿಸಿಲ್ ಆಗಿದೆ ಎನ್ನುತ್ತಾರೆ. ನಿಪಿ-2 ರಲ್ಲಿ ನನ್ನ ಸೋದರತ್ತೆಗೆ ಸೇರಬೇಕಾಗಿದ್ದ ಹಣದ ಮೊತ್ತ 5 ಲಕ್ಷಕ್ಕೆ ಬಂದಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆನಂತರ ಸಾಕಷ್ಟು ವ್ಯವಹಾರಗಳು ಆಗಿದ್ದವು ಎನ್ನುತ್ತಾರೆ. ನಿಪಿ-2 ರಲ್ಲಿ ನಮೂದಿಸಿರುವಂತೆ 5 ಲಕ್ಷ ಹಣವನ್ನ ನನ್ನ ಸೋದರತ್ತೆ ಕುಟುಂಬಕ್ಕೆ ಸೇರಿಸಿಲ್ಲ. ನನ್ನ ಅಜ್ಜ ತೀರಿಕೊಂಡ ಕಾಲಕ್ಕೆ ಅವರ ಖಾತೆಯಲ್ಲಿ ಯಾವುದೇ ಹಣ ಇರಲಿಲ್ಲ ಎಂದರೆ ಸರಿ. ನಿಪಿ-1 ಮತ್ತು ನಿಪಿ-2 ರ ಷರತ್ತಿನಂತರ ನಡೆದುಕೊಂಡಿಲ್ಲ ಎಂದರೆ ಸಾಕ್ಷಿ ಪರೀಸ್ಥಿತಿ ಸರಿ ಇರಲಿಲ್ಲ ಬೇರೆ ಕಾರಣಾಂತರಗಳಿಂದ ನಡೆದುಕೊಂಡಿಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ

ಓ.ಎಸ್.ನಂಃ 202/2023
ಪಿ.ಡಬ್ಲ್ಯೂಃ 1